ಸಾರ್ವಜನಿಕ ಶಿಕ್ಷಣ ಇಲಾಖೆ

# ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು

# Karnataka School Quality Assessment & Accreditation Council

ಕೆ.ಎಸ್.ಇ.ಎ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–03. ದೂರವಾಣಿ ಸಂಖ್ಯೆ: 23341615, 23562283, 29720300

e-mail: ksqaacbangalore@gmail.com

ಸಂಖ್ಯೆ: KSEAB/DPIE/KSQ2(MISC)/4/2023-KSQAAC ದಿನಾಂಕ: 18–01–2024

## "ದರಪಟ್ಟಿ ಆಹ್ವಾನ ಪತ್ರ"

ವಿಷಯ: 2023–24 ನೇ ಸಾಲಿನ ರಾಜ್ಯದ ಸರ್ಕಾರಿ ಪ್ರಾಥಮಿಕ /ಪ್ರೌಢಶಾಲಾ ಸಹಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು/ ತತ್ಸಮಾನ ವೃಂದದ ನಿರ್ದಿಷ್ಟಪಡಿಸಿದ ಹುದ್ದೆಗಳಿಗೆ ನೇಮಕಾತಿಗಾಗಿ ಲಿಖಿತ ಪರೀಕ್ಷೆಯನ್ನು ನಡೆಸುವ ಸಂಬಂಧವಾಗಿ ಪರೀಕ್ಷಾ ನಂತರ ಉತ್ತರಿಸಿದ OMR ಮತ್ತು Marks Sheet OMR ಗಳ Scanning, Editing, Processing and Report Generation ಮಾಡಲು ದರಪಟ್ಟಿ ಆಹ್ವಾನಿಸಿರುವ ಬಗ್ಗೆ.

*~*~*~*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2023–24ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಪ್ರಾಥಮಿಕ/ ಪ್ರೌಢಶಾಲಾ ಸಹಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು/ ತತ್ಸಮಾನ ವೃಂದದ ನಿರ್ದಿಷ್ಟಪಡಿಸಲಾದ ಹುದ್ದೆಗಳಾದ ಸಿ.ಆರ್.ಪಿ, ಬಿ.ಆರ್.ಪಿ ಮತ್ತು ಶಿಕ್ಷಣ ಸಂಯೋಜಕರು(ಇ.ಸಿ.ಒ) ಪ್ರಾಥಮಿಕ, ಬಿ.ಆರ್.ಪಿ, (ವಿಜ್ಞಾನ ಮತ್ತು ಕಲಾ), ಶಿಕ್ಷಣ ಸಂಯೋಜಕರು (ಇ.ಸಿ.ಒ) ಪ್ರೌಢ ಹಾಗೂ ಗ್ರೂಪ್–ಬಿ ವೃಂದದ ಹುದ್ದೆಗಳಾದ, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು(ಬಿ.ಆರ್.ಸಿ), ಎ.ಪಿ.ಸಿ (ಎಸ್.ಎಸ್.ಕೆ ಮತ್ತು ಆರ್.ಎಂ.ಎಸ್.ಎ), ವಿಷಯ ಪರಿವೀಕ್ಷಕರು(ಎಸ್.ಐ), ಸಹಾಯಕ ನಿರ್ದೇಶಕರು ಮಧ್ಯಾಹ್ನದ ಉಪಹಾರ ಯೋಜನೆ, ಈ ಹುದ್ದೆಗಳ ನೇಮಕಾತಿಗಾಗಿ ನಡೆಸುವ ಪರೀಕ್ಷಾ ನಂತರ ಉತ್ತರಿಸಿದ OMR ಮತ್ತು Marks Sheet OMR ಗಳ SCANNING, EDITING, PROCESSING AND REPORT GENERATION ಮಾಡುವ ಸಂಬಂಧವಾಗಿ ಅರ್ಹ ಸಂಸ್ಥೆಗಳಿಂದ ಈ ಕೆಳಗಿನಂತೆ ಷರತ್ತುಗಳಿಗೊಳಪಟ್ಟು ದರಪಟ್ಟಿಯನ್ನು ಆಹ್ವಾನಿಸಿದೆ.

| Sl. No | Printing And Supply Works | Quantity Approximate | UNIT | Unit Rate ( including of all taxes) |
|---|---|---|---|---|
| 01 | Designing, Printing and Over Printing of OMR<br>(Including buffer OMR)<br>(Paper-1 & Paper-2)<br>(A4 Size, Two Colour, 110 GSM, Single Side Printing) | **Paper 1**<br>*4000 OMR Sheets*<br>**Paper 2**<br>8000 OMR Sheets<br>(**Total** 12000 OMR Sheets) | | |
| 02 | Attendance Cum Absentees Sheets<br>(A4 Size, Single Colour, 70GSM) | 12 Candidates in 1 Sheet<br>(Single Side)<br>1500 Sheets | | |
| 03 | Pre Printed Adhesive Covers<br>(200 Microns, 15*10 cm with flap and gumming) | 950 Covers | | |
| 04 | Marks Sheet OMR (AML OMR)<br>(A4 Size, Two Colour, 110 GSM, Single Side Printing) | 20 Candidates in1 Sheet<br>(Single Side)<br>600 Sheets | | |
| 05 | *OMRs & Marks Sheet OMRs Scanning,* Editing, Processing | Paper 1 - 4000 OMR Sheets<br>Paper 2 - 8000 OMR Sheets<br>(Total – 12000 OMR Sheets) | | |
| 06 | | 600 Marks Sheet OMR (AML OMR) | | |
| 07 | Report Generation | Approximately 03 Templates | | |

ಷರತ್ತುಗಳು:-

1. ಈ ದರಪಟ್ಟಿಯಲ್ಲಿ ನೀಡಿರುವ ನಮೂನೆಯಂತೆ ವಿವರಗಳನ್ನು ನಮೂದಿಸುವುದು.
2. ಮೇಲ್ಕಂಡ ಕಾರ್ಯಗಳಿಗೆ ಎಲ್ಲಾ ತರಹದ ತೆರಿಗೆಗಳನ್ನು ಮತ್ತು GST ಒಳಗೊಂಡಂತೆ ದರವನ್ನು ನಮೂದಿಸತಕ್ಕದ್ದು.
3. ಕಡಿಮೆ ದರ ನಮೂದಿಸಿರುವ ಸಂಸ್ಥೆಯ ದರಗಳನ್ನು ಪರಿಗಣಿಸಲಾಗುವುದು.
4. ಈ ಕಛೇರಿಯಿಂದ ನಿಯಮಾನುಸಾರ TDS & GST ಕಟಾಯಿಸಲಾಗುವುದು.
5. ಒಂದು ಸಂಸ್ಥೆಯವರು ಒಂದು ದರಪಟ್ಟಿಯನ್ನು ಮಾತ್ರ ನೀಡಲು ಅವಕಾಶವಿರುತ್ತದೆ.
6. ಮೇಲ್ಕಂಡ ಕಾರ್ಯವನ್ನು ನಿಗದಿತ ಅವಧಿಯೊಳಗೆ ತೃಪ್ತಿಕರವಾಗಿ ಪೂರ್ಣಗೊಳಿಸತಕ್ಕದ್ದು.
7. ಒ.ಎಂ.ಆರ್. ಹಾಳೆಗಳ ವಿನ್ಯಾಸವನ್ನು ಪ್ರವೇಶ ಪರೀಕ್ಷೆಯ ಅಗತ್ಯತೆಗಳಿಗೆ ಅನುಗುಣವಾಗಿ ಹಾಗೂ ಸ್ಕ್ಯಾನ್ ಮಾಡಿ ದತ್ತಾಂಶ ಪಡೆಯುವ ರೀತಿಯಲ್ಲಿ ರಚಿಸಿರಬೇಕು ಹಾಗೂ ಈ ಬಗ್ಗೆ ಎಲ್ಲಾ ಮಾಹಿತಿಯನ್ನು ಕೆ.ಎಸ್.ಕ್ಯು.ಎ.ಎ.ಸಿ ಕಛೇರಿಯಿಂದ ಪಡೆದು ಖಾತ್ರಿ ಪಡಿಸಿಕೊಳ್ಳಬೇಕು ಹಾಗೂ ಅನುಮೋದನೆ ಪಡೆದು ನಂತರವೇ ಸೂಚಿಸಿದ ಸಂಖ್ಯೆಗಳಿಗೆ ಅನುಗುಣವಾಗಿ ಮುದ್ರಿಸುವುದು.
8. ಒ.ಎಂ.ಆರ್. ಹಾಳೆಗಳನ್ನು ಸರಬರಾಜು ಮಾಡಲು ಸಹಾಯಕವಾಗುವಂತೆ ಈ ಕಛೇರಿಯಿಂದ ನೀಡಲಾಗುವ ಡೇಟಾಬೇಸ್‌ನಂತೆ ಪರೀಕ್ಷಾ ಕೇಂದ್ರವಾರು ಕವರುಗಳಲ್ಲಿಟ್ಟು, ಜಿಲ್ಲಾವಾರು ಬಂಡಲ್‌ಗಳಲ್ಲಿ ಪ್ಯಾಕ್ ಮಾಡಿ ವೇಳಾ ಪಟ್ಟಿಯಂತೆ 34 ಜಿಲ್ಲಾ ಡಯಟ್‌ಗಳಿಗೆ ಕಳುಹಿಸುವುದು.
9. ಪರೀಕ್ಷಾ ಕಾರ್ಯ ನಡೆಯುವ ವೇಳಾಪಟ್ಟಿಯನ್ನು ನೀಡಲಾಗುವುದು. ಅದರಂತೆ ಪರೀಕ್ಷಾ ದಿನಾಂಕಕ್ಕೆ ಮೂರು ದಿನಗಳ ಮುಂಚಿತವಾಗಿ ಒ.ಎಂ.ಆರ್ ಬಂಡಲ್‌ಗಳು ಜಿಲ್ಲಾ ಕೇಂದ್ರಗಳಿಗೆ ತಲುಪುವಂತೆ ಯೋಜನೆ ಸಿದ್ದಪಡಿಸಿಕೊಂಡು ಕಾರ್ಯ ನಿರ್ವಹಿಸುವುದು. ಯಾವುದೇ ಕಾರಣದಿಂದ ಸಾಮಗ್ರಿಗಳ ವಿತರಣೆ ತಡವಾಗಬಾರದು. ವಿಳಂಬವಾದಲ್ಲಿ ಒಟ್ಟು ಬಿಲ್ಲಿನ ಮೊತ್ತದಲ್ಲಿ ದಿನಕ್ಕೆ ಶೇ. 1% ರಂತೆ ದಂಡ ವಿಧಿಸಲಾಗುವುದು.
10. ಈ ಕಾರ್ಯವು ಪರೀಕ್ಷಾ ಕಾರ್ಯವಾಗಿರುವುದರಿಂದ ಪರೀಕ್ಷಾ ಗೌಪ್ಯತೆಯನ್ನು ಕಾಪಾಡಿಕೊಳ್ಳುವಂತಿರಬೇಕು.
11. ಈ ಕಾರ್ಯಕ್ಕೆ ಕಛೇರಿಯಿಂದ ಯಾವುದೇ ಮುಂಗಡವನ್ನು ನೀಡಲಾಗುವುದಿಲ್ಲ.
12. ದರಪಟ್ಟಿಯನ್ನು ಮೊಹರು ಮಾಡಿದ ಲಕೋಟೆಯಲ್ಲಿ **ದಿನಾಂಕ:29.01.2024 ರಂದು ಸಂಜೆ 5-00 ರ ಒಳಗಾಗಿ** ಈ ಕಛೇರಿಗೆ ಸಲ್ಲಿಸಬೇಕು. ನಿಗಧಿತ ಸಮಯದ ನಂತರ ಬರುವ ದರಪಟ್ಟಿಯನ್ನು ಸ್ವೀಕರಿಸಲಾಗುವುದಿಲ್ಲ.
13. ಪರೀಕ್ಷೆ ಮುಗಿದ ನಂತರ ಜಿಲ್ಲೆಗಳಿಂದ ಬಂದ OMR ಬಂಡಲ್‌ಗಳನ್ನು ಹಸ್ತಾಂತರಿಸಲಾಗುವುದು. ನಂತರ Scanning ಪ್ರಕ್ರಿಯೆ ಆರಂಭಿಸುವುದು.
14. ಪತ್ರಿಕೆ-2 ರ ವಿವರಣಾತ್ಮಕ ಪ್ರಶ್ನೆಗಳ ಅಂಕಗಳನ್ನು ಮೌಲ್ಯಮಾಪಕರು Marks Sheet OMR (AML OMR) ನಲ್ಲಿ ನಮೂದಿಸಿ ನೀಡಿದ ನಂತರ Marks Sheet OMR (AML OMR) ಗಳನ್ನು Scan ಮಾಡುವುದು.
15. ಆಯ್ಕೆಯಾದವರು ಸೂಕ್ತ ಕಂಪ್ಯೂಟರ್ ಸಾಮಗ್ರಿ ಮತ್ತು ಉತ್ತಮ ಗುಣಮಟ್ಟದ High End OMR Scanning Machines ಗಳನ್ನು ಸೂಕ್ತ Software ಗಳನ್ನು ಹೊಂದಿದ್ದು ತಮ್ಮ ಸ್ವಂತ ಖರ್ಚಿನಲ್ಲಿ ಸ್ಕ್ಯಾನಿಂಗ್ ಅಳವಡಿಸುವುದು. ಇದಕ್ಕೆ ಕಛೇರಿಯಿಂದ ಯಾವುದೇ ಹಣ ನೀಡುವುದಿಲ್ಲ.
16. ಸಂಪೂರ್ಣ ಸ್ಕ್ಯಾನಿಂಗ್ ಪ್ರಕ್ರಿಯೆಯು ಕೆ.ಎಸ್.ಕ್ಯು.ಎ.ಎ.ಸಿ ಕಛೇರಿ ಆವರಣದಲ್ಲಿ ನಡೆಸಬೇಕಾಗಿದೆ.
17. ಸ್ಕ್ಯಾನಿಂಗ್ ಪ್ರಕ್ರಿಯೆಯಲ್ಲಿ ಯಾವುದೇ ದೋಷಗಳುಂಟಾಗದಂತೆ (Data Errors, scanning Errors) ಸ್ಕ್ಯಾನಿಂಗ್ ಪ್ರಕ್ರಿಯೆ ನಿರ್ವಹಿಸುವುದು.
18. ಕಛೇರಿಯ ಅನುಮತಿಯಿಲ್ಲದೆ ಯಾವುದೇ ಮಾಹಿತಿಗಳನ್ನು ಯಾರೊಂದಿಗೂ ಹಂಚಿಕೊಳ್ಳಬಾರದು.
19. OMRಗಳನ್ನು ನೀಡಿದ ನಂತರ 04 ದಿನಗಳೊಳಗೆ ಸ್ಕ್ಯಾನಿಂಗ್, ರಿಪೋರ್ಟ್ ಜನರೇಷನ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಫಲಿತಾಂಶ ನೀಡಬೇಕು ತಪ್ಪಿದಲ್ಲಿ ಒಟ್ಟು ಬಿಲ್ಲಿನ ಮೊತ್ತದಲ್ಲಿ ವಿಳಂಬವಾದ ದಿನಕ್ಕೆ ಶೇ. 1% ರಂತೆ ದಂಡ ವಿಧಿಸಲಾಗುವುದು
20. ರಿಪೋರ್ಟ್‌ನ್ನು CD/DVDನಲ್ಲಿ ನೀಡಬೇಕು.
21. ಸಂಪೂರ್ಣ ಫಲಿತಾಂಶ ನೀಡಿ ಬಿಲ್ಲನ್ನು ಸಲ್ಲಿಸಿದ ನಂತರ ನಿಯಮಾನುಸಾರ ಪರಿಶೀಲಿಸಿ ಪಾವತಿಗೆ ಕ್ರಮವಹಿಸುವುದು.
22. ತಿಳಿಸಿರುವ ಎಲ್ಲಾ Item ಗಳಿಗೂ ಪ್ರತ್ಯೇಕವಾಗಿ ದರ ನಮೂದಿಸುವುದು.

ಕಾರ್ಯನಿರ್ವಾಹಕ ನಿರ್ದೇಶಕರು
ಕೆ.ಎಸ್.ಕ್ಯು.ಎ.ಎ.ಸಿ

ಪ್ರತಿಯನ್ನು:-

1. ಕಛೇರಿಯ ಸೂಚನಾ ಫಲಕಕ್ಕೆ.
2. ಕಛೇರಿ ಪ್ರತಿ.